ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 23/2/21



ಭಟ್ಕಳ: ಪ್ರತಿಭಟನಾ ಸ್ಥಳದಲ್ಲಿ ಉಪಸ್ಥಿತರಿದ್ದ ಸಾವಿರಾರು ಜನರು.

# ಪಂಚಮಸಾಲಿ ಮೀಸಲಿಗೆ 28 ಸಮುದಾಯಗಳ ಆಕ್ರೋಶ

**ಭಟ್ಕಳ:** ಪಂಚಮಸಾಲಿ ಸಮುದಾಯ 2ಎ ಮೀಸಲು ಹೋರಾಟ ತೀವ್ರಗೊಂಡ ಬೆನ್ನಲ್ಲೇ ಈಡಿಗ ಸೇರಿದಂತೆ ವಿವಿಧ ಸಮುದಾಯಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು ಭಟ್ಕಳಗಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿವೆ. ಪಂಚಮಸಾಲಿಗಳ 2ಎ ಬೇಡಿಕೆ ಪುರಸ್ಕರಿಸ ಬಾರದು, ಹಾಲಿ ಇರುವ ಸುಮಾರು 290 ಜಾತಿಗಳಿಗೆ ಇದರಿಂದ ಅನ್ಯಾಯವಾಗಲಿದೆ ಎಂದು ಎಚ್ಚರಿಕೆ ನೀಡಿವೆ.

2ಎ ಹಿತರಕ್ಷಣಾ ವೇದಿಕೆ ವತಿಯಿಂದ ಏರ್ಪಡಿಸಲಾಗಿದ್ದ ಬೃಹತ್ ಪ್ರತಿಭಟನಾ ಮೆರವಣಿಗೆ ಹಾಗೂ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ ಸಭೆಯಲ್ಲಿ ವಿವಿಧ ಸುಮಾರು 28 ಜಾತಿಯ 15 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಆರು ಕಿಮೀ ಮೆರವಣಿಗೆ ನಡೆಸಿ '2ಎ.ಮೀಸಲಾತಿಗೆ ಬೇರೆ ಯಾವುದೇ ಜಾತಿ ಸೇರಿಬಾರದು' ಎನ್ನುವ ಒಕ್ಕೊರಲ ಧ್ವನಿ ಮೊಳಗಿಸಿದರು.

**ಸ್ವಾಮೀಜಿಗಳ ಆಗ್ರಹ:** ಶ್ರೀರಾಮ ಕ್ಷೇತ್ರ ಉಜಿರೆಯ ಗುರುಗಳಾದ ಶ್ರೀ ಬ್ರಹ್ಮಾನಂದ ಸರಸ್ವತೀ ಸ್ವಾಮೀಜಿ ಪ್ರತಿಭಟನಾ ಸಭೆ ಸಾನ್ನಿಧ್ಯ ವಹಿಸಿ ಮಾತನಾಡಿ, 2ಎ ಮೀಸಲಾತಿಯನ್ನು ಸಂವಿಧಾನ ಬದ್ಧವಾಗಿ ನೀಡಬೇಕೇ ವಿನಃ ಸರ್ಕಾರ ಯಾರದ್ದೋ ಶಕ್ತಿ ಪ್ರದರ್ಶನಕ್ಕೆ ಮಣಿಯ ಬಾರದು. ಈಗಾಗಲೇ 2ಎ ಅಡಿಯಲ್ಲಿ ಸಣ್ಣ ಸಣ್ಣ ಜಾತಿಯ ಬೇರೆ ದೊಡ್ಡ ಸಮುದಾಯವನ್ನು ಸೇರಿಸುವುದರಿಂದ ಅನ್ಯಾಯವಾಗುತ್ತದೆ. ಅಲ್ಲದೇ ಸಂವಿಧಾನದ ಆಶಯಗಳಿಗೆ ವಿರುದ್ಧವಾಗುತ್ತದೆ. ಮೀಸಲಾತಿ ಕೊಡುತ್ತೇವೆ ಎಂದು ಹೇಳಿಕೊಳ್ಳುತ್ತ ಬಂದಿದ್ದ ಅನೇಕ ಸರ್ಕಾರಗಳು ಉರುಳಿವೆ. ನಮ್ಮ ಸಮುದಾಯಕ್ಕೆ ನೀಡಿದ ಹಕ್ಕನ್ನು ವಂಚಿಸುವ ಹಕ್ಕು ಯಾರಿಗೂ ಇಲ್ಲ ಎಂದರು.



ಸರಕಾರ 2ಎ ಮೀಸಲಾತಿ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳದಿದ್ದರೆ ನಮ್ಮ ಹಕ್ಕಿನ ರಕ್ಷಣೆಗೆ ನಾವು ಯಾವುದೇ ಹೋರಾಟಕ್ಕೂ ಸಿದ್ಧರಿದ್ದೇವೆ. ಬೆಂಗಳೂರು ಚಲೋ, ವಿಧಾನಸೌಧ ಚಲೋ, ಪಾದಯಾತ್ರೆ ಜತೆಗೆ ಹೈಕೋರ್ಟ್-ಸುಪ್ರೀಂಕೋರ್ಟ್ ಮೆಟ್ಟಿಲೇರಲೂ ತಯಾರಿದ್ದೇವೆ. ಅಗತ್ಯ ಬಿದ್ದರೆ ನಾನೇ ಕೋರ್ಟ್‌ನಲ್ಲಿ ನಿಂತು 2ಎ ಯಥಾಸ್ಥಿತಿಗೆ ಆಗ್ರಹಿಸಿ ವಾದ ಮಾಡಲೂ ಹಿಂಜರಿಯಲಾರೆ ಎಂದು ಸ್ವತಃ ವಕೀಲರೂ ಆಗಿರುವ ಸ್ವಾಮೀಜಿ ಹೇಳಿದರು.

ನಮ್ಮ ಹೋರಾಟ ಸರಕಾರದ ವಿರುದ್ಧವಾಗಲಿ, ಯಾವುದೇ ಸಮುದಾಯ ವಿರುದ್ಧವಾಗಲಿ ಅಲ್ಲ, ನಾವೇನೂ ಹೆಚ್ಚಿನ ಮೀಸಲಾತಿ ಕೇಳುತ್ತಿಲ್ಲ, 2ಎಯಲ್ಲಿ ಯಥಾಸ್ಥಿತಿ ಕಾಪಾಡಿ ಎನ್ನುವುದು ನಮ್ಮ ಈ ಹೋರಾಟದ ಬೇಡಿಕೆ ಎಂದು ಸ್ಪಷ್ಟಪಡಿಸಿದರು. ಯಡಿಯೂರಪ್ಪನವರು ಒಳ್ಳೆಯವರೇ ಆಗಿದ್ದಾರೆ. ಆದರೆ ಅವರ ಮೇಲೆ ಒತ್ತಡ ಹಾಕಿ ಸಂಕಷ್ಟಕ್ಕೆ ಸಿಲುಕಿಸುವ ಕೆಲಸ ಆಗುತ್ತಿದೆ ಎಂದರು. 2ಎ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಹಾಗೂ ಮಾಜಿ ಶಾಸಕ ಜೆ.ಡಿ.ನಾಯ್ಕ ಮಾತನಾಡಿ, ನಮ್ಮದು ಚಿಕ್ಕ ಸಮುದಾಯವಾಗಿದ್ದು ಸುಮಾರು 1 ಕೋಟಿ ಜನ ಈ ರಾಜ್ಯದಲ್ಲಿದ್ದೇವೆ. ಅದರೆ ಈಗ 2ಎ ಅಡಿಯಲ್ಲಿ ಸೌಲಭ್ಯ ಕೇಳುತ್ತಿರುವ ಸಮುದಾಯದ ಜನರೇ 1.5 ಕೋಟಿಯಷ್ಟಿದ್ದು ನಾವು ಮುಂದಿನ ದಿನಗಳಲ್ಲಿ ಎಲ್ಲ ಸೌಲಭ್ಯಗಳಿಂದ ವಂಚಿತರಾಗಲಿದ್ದೇವೆ ಎಂದರು.